**ಸಾಕ್ಷಿಯನ್ನು ದಿಃ 02.06.2022 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ ಆರ್.ಜಿ. ವಕೀಲರಿಂದಃ**

ಈಗ ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ನ್ಯಾಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಹಾಗೂ ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿರುತ್ತವೆ ಮತ್ತು ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ನಾನು ಅದಕ್ಕೆ ಸಹಿಯನ್ನು ಹಾಕಿರುತ್ತೇನೆ.

ನಾನು ಕೆಲವೊಂದು ದಾಖಲೆಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ನೋಡಿದರೆ ಗುರುತಿಸುತ್ತೇನೆ.

ಕಂದಾಯ ರಶೀದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ ಡಿ 6 ಎಂದು ಗುರುತಿಸಲಾಯಿತು. ಹಕ್ಕು ಬಿಟ್ಟು ಕೊಟ್ಟ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಈ ಹಂತದಲ್ಲಿ ಎದುರುದಾರ ವಕೀಲರು ಹಕ್ಕು ಬಿಟ್ಟು ಕೊಟ್ಟ ಪತ್ರ ಕಡ್ಡಾಯವಾಗಿ ನೋಂದಣಿಯಾಗಬೇಕಾದ ದಾಖಲೆಯಾಗಬೇಕಾಗಿರುವುದರಿಂದ, ನಿಶಾನೆಗೊಳಿಸಲು ತಕರಾರು ಮಾಡಿರುತ್ತಾರೆ. ವಾದಿ ಪರ ವಕೀಲರು ಈ ದಾವೆ ನಿರ್ಬಂದಾಜ್ಞೆಗೆ ಮಾತ್ರ ಇರುವುದರಿಂದ, ಮೇಲಾಧಾರ (ಕೋಲಾಟರಲ್) ಉದ್ದೇಶಕ್ಕಾಗಿ ನಿಶಾನೆಗೊಳಿಸಬಹುದೆಂದು ಕೋರಿರುತ್ತಾರೆ. ಆದ್ದರಿಂದ ತಕರಾರಿಗೆ ಒಳಪಟ್ಟು ನಿ ಡಿ 7 ಎಂದು ಗುರುತಿಸಲಾಯಿತು. ವಿಭಾಗ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಈ ಹಂತದಲ್ಲಿ ಎದುರುದಾರ ವಕೀಲರು ವಿಭಾಗ ಪತ್ರ ಕಡ್ಡಾಯವಾಗಿ ನೋಂದಣಿಯಾಗಬೇಕಾದ ದಾಖಲೆಯಾಗಬೇಕಾಗಿರುವುದರಿಂದ, ನಿಶಾನೆಗೊಳಿಸಲು ತಕರಾರು ಮಾಡಿರುತ್ತಾರೆ. ವಾದಿ ಪರ ವಕೀಲರು ಈ ದಾವೆ ನಿರ್ಬಂದಾಜ್ಞೆಗೆ ಮಾತ್ರ ಇರುವುದರಿಂದ, ಮೇಲಾಧಾರ (ಕೋಲಾಟರಲ್) ಉದ್ದೇಶಕ್ಕಾಗಿ ನಿಶಾನೆಗೊಳಿಸಬಹುದೆಂದು ಕೋರಿರುತ್ತಾರೆ. ಆದ್ದರಿಂದ ತಕರಾರಿಗೆ ಒಳಪಟ್ಟು ನಿ ಡಿ 8 ಎಂದು ಗುರುತಿಸಲಾಯಿತು.

**ಆದ್ದರಿಂದ ದಾವೆಯನ್ನು ವಜಾ ಮಾಡಲು ವಿನಂತಿ.**

**ಪಾಟೀ ಸವಾಲುಃ ಶ್ರೀ ಎ.ಎಂ.ಆರ್. ವಕೀಲರಿಂದಃ**

ಪಾಟೀ ಸವಾಲಿಗಾಗಿ ವಕೀಲರು ಕಾಲಾವಕಾಶ ಕೋರಿದ್ದು, ಅದರಂತೆ ಕಾಲಾವಕಾಶ ನೀಡಿ ಮುಂದೂಡಲಾಯಿತು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಅಜಿತ್ ದೇವರಮನಿ)**
**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**
**ಬಂಗಾರಪೇಟೆ**

**ಸಾಕ್ಷಿಯನ್ನು ದಿಃ 15.07.2022 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎ.ಎಂ.ಆರ್. ವಕೀಲರಿಂದಃ**

1 ನೇ ವಾದಿ ನನಗೆ ಅಕ್ಕ ಎಂದರೆ ಸರಿ. 2 ನೇ ವಾದಿ ನನ್ನ ಭಾವ. 1 ನೇ ಪ್ರತಿವಾದಿ ನನ್ನ ಮತ್ತು 1 ನೇ ವಾದಿಯ ತಂದೆ. 1 ನೇ ಪ್ರತಿವಾದಿಗೆ ನಾರಾಯಣಪ್ಪ ಎನ್ನುವವರು ಅಣ್ಣ ಎಂದರೆ ಸರಿ. 1 ನೇ ಪ್ರತಿವಾದಿ ಮತ್ತು ನಾರಾಯಣಪ್ಪ ವೆಂಕಟಪ್ಪನ ಮಕ್ಕಳು ಎಂದರೆ ಸರಿ. ಸರ್ವೇ ನಂಬರ್ 17/1 ರಲ್ಲಿ 1 ನೇ ಪ್ರತಿವಾದಿ ಮತ್ತು ನಾರಾಯಣಪ್ಪನಿಗೆ 7 ಗುಂಟೆ ಜಮೀನು ಒಟ್ಟು ಕುಟುಂಬದ ಆಸ್ತಿಯಾಗಿತ್ತು ಎಂದರೆ ಸರಿ. ಸದರಿ 7 ಗುಂಟೆ ಜಮೀನಿನ ಪೂರ್ವಕ್ಕೆ ಮುನಿಯಪ್ಪನ ಜಮೀನು, ಪಶ್ಚಿಮಕ್ಕೆ ರಸ್ತೆ (ಓಣಿ), ಉತ್ತರಕ್ಕೆ ರೆಡ್ಡಪ್ಪರೆಡ್ಡಿಯವರ ಜಮೀನು ಮತ್ತು ದಕ್ಷಿಣಕ್ಕೆ ಒಟ್ಟಪ್ಪನ ಜಮೀನು ಅಂದರೆ ಸರಿ. ಉತ್ತರ ಕಡೆಯಿರುವ ರೆಡ್ಡಪ್ಪರೆಡ್ಡಿರವರ ಜಮೀನು ವೆಂಕಟರಾಮಯ್ಯರವರು ಖರೀದಿಸಿರುತ್ತಾರೆಂದರೆ ಸರಿ. ನಿ ಡಿ 8 ರ ಪ್ರಕಾರ 7 ಗುಂಟೆ ಜಮೀನನ್ನು 1 ನೇ ಪ್ರತಿವಾದಿ ಮತ್ತು ಅವರ ಅಣ್ಣ ನಾರಾಯಣಪ್ಪ ವಿಭಾಗ ಮಾಡಿಕೊಂಡರು ಎಂದರೆ ಸರಿ. ಸದರಿ ವಿಭಾಗದ ಪ್ರಕಾರ ಉತ್ತರದ ಕಡೆಗೆ ಮೂರೂವರೆ ಗುಂಟೆ ಜಮೀನು ನನ್ನ ತಂದೆ 1 ನೇ ಪ್ರತಿವಾದಿಗೆ ಬಂದಿರುತ್ತದೆ, ದಕ್ಷಿಣದ ಕಡೆ ಮೂರೂವರೆ ಗುಂಟೆ ಜಮೀನು ನನ್ನ ದೊಡ್ಡಪ್ಪ ನಾರಾಯಣಪ್ಪರವರಿಗೆ ಬಂದಿರುತ್ತದೆ. ಒಟ್ಟಾರೆ 7 ಗುಂಟೆ ಜಮೀನು ನಮ್ಮ ಊರಿಗೆ ಹೊಂದಿಕೊಂಡಂತೆ ಇದೆ ಎಂದರೆ ಸರಿ. ನಮಗೆ ಬಂದಂತಹ ಮೂರೂವರೆ ಗುಂಟೆ ಜಮೀನಿಗೆ ಪಂಚಾಯಿತಿ ಖಾತೆಯಾಗಿತ್ತು ಎಂದರೆ ಸರಿ. ನಮಗೆ ಬಂದ ಮೂರೂವರೆ ಗುಂಟೆ ಜಮೀನಿನ ಪೈಕಿ ಪಶ್ಚಿಮದ ಕಡೆ ಇರುವ ಓಣಿಗೆ ಹೊಂದಿಕೊಂಡಂತೆ ಪೂರ್ವ ಪಶ್ಚಿಮ 50 ಅಡಿ, ಉತ್ತರ ದಕ್ಷಿಣ 36 ಅಡಿ ಜಮೀನನ್ನು (ದಾವಾ ಸ್ವತ್ತನ್ನು) 1 ನೇ ವಾದಿಗೆ ಕೊಟ್ಟಿರುತ್ತೇವೆ. ನಿ ಪಿ 1 ರಂತೆ ಕ್ರಯ ಪತ್ರದ ಮುಖಾಂತರ ವಾದಿಗಳಿಗೆ ದಾವಾ ಸ್ವತ್ತನ್ನು ಕೊಟ್ಟಿರುತ್ತೇವೆ . ನಿ ಡಿ 7 ರ ಪ್ರಕಾರ 1 ನೇ ವಾದಿಯು ನನಗೆ ಮತ್ತು 1 ನೇ ಪ್ರತಿವಾದಿಗೆ ದಾವಾ

ಸ್ವತ್ತನ್ನು ಪಡೆದುಕೊಂಡು ಉಳಿದ ಜಮೀನುಗಳಿಗೆ ಹಕ್ಕು ಬಿಡುಗಡೆ ಪತ್ರ ಮಾಡಿಕೊಟ್ಟಿರುತ್ತಾರೆಂದರೆ ಸರಿ. ದಾವಾ ಸ್ವತ್ತಿನಲ್ಲಿ ವಾದಿಯರು ಮನೆ ಕಟ್ಟಿಕೊಂಡಿರುತ್ತಾರೆಂದರೆ ಸರಿ. ನಿ ಡಿ 2 ರಲ್ಲಿ ಬಲಗಡೆ ಇರುವ ಮನೆ ವಾದಿಯರ ಮನೆ, ನೀಲಿ ಶೀಟ್‌ನಲ್ಲಿರುವ ಮನೆ ವೆಂಕಟರಾಮಯ್ಯನವರ ಮನೆ ಎಂದರೆ ಸರಿ. ವಾದಿಯರು ಉತ್ತರ ದಕ್ಷಿಣ 30 ಅಡಿ ಮನೆ ಕಟ್ಟಿರುತ್ತಾರೆಂದರೆ ಸರಿ.

ನಾನು ಎಸ್.ಎಸ್.ಎಲ್.ಸಿ. ವರೆಗೆ ಓದಿರುತ್ತೇನೆ. ನಿ ಪಿ 1 ಮತ್ತು ನಿ ಡಿ 7 ಅನ್ನು ಬರೆದುಕೊಡುವ ಕಾಲಕ್ಕೆ ನಾನು ಇದ್ದೆ. ನಿ ಪಿ 1 ರ ಎಲ್ಲಾ ಪುಟಗಳಲ್ಲಿರುವ ನಾಗರಾಜ್ ಎಂಬ ಸಹಿ ನನ್ನದೇ ಇರುತ್ತದೆ. ನಿ ಪಿ 1 ಮತ್ತು ನಿ ಡಿ 7 ರಲ್ಲಿ ಚೆಕ್ಕುಬಂದಿ ಸರಿಯಿಲ್ಲವೆಂದು ಅರ್ಜಿ ಅಥವಾ ಮೇಲ್ಮನವಿ ಸಲ್ಲಿಸಿಲ್ಲ. ಒಟ್ಟಾರೆ ನಮ್ಮ ಮೂರೂವರೆ ಗುಂಟೆ ಜಮೀನಿನ ದಕ್ಷಿಣಕ್ಕೆ ಕಲ್ಲು ಚಪ್ಪಡಿ ಗೋಡೆ ನಿರ್ಮಿಸಿರುತ್ತೇವೆ. ನಿ ಡಿ 3 ರ ಪ್ರಕಾರ ನಮ್ಮ ಒಟ್ಟಾರೆ ಮೂರೂವರೆ ಗುಂಟೆ ಜಮೀನಿಗೆ ದಕ್ಷಿಣ ದಿಕ್ಕಿಗೆ ಕಲ್ಲು ಚಪ್ಪಡಿಗಳನ್ನು ಪೂರ್ವ ಪಶ್ಚಿಮವಾಗಿ ಹಾಕಿರುತ್ತೇವೆ. ಕಲ್ಲು ಚಪ್ಪಡಿಗೂ ಮತ್ತು ವಾದಿಯರ ಮನೆ ನಡುವೆ 12 ಅಡಿ ಜಾಗ ಇರುತ್ತದೆ ಎಂದರೆ ಸಾಕ್ಷಿ 18 ಅಡಿ ಜಾಗ ಇರುತ್ತದೆ ಎಂದು ನುಡಿಯುತ್ತಾರೆ. ನಿ ಪಿ 1 ರಲ್ಲಿ ತೋರಿಸಿರುವ ಚೆಕ್ಕುಬಂದಿಯ ದಕ್ಷಿಣಕ್ಕೆ ಇರುವ ಜಾಗ ನಿ ಡಿ 3 ರಲ್ಲಿರುವ ಮನೆ ಮತ್ತು ಕಲ್ಲು ಚಪ್ಪಡಿಯ ಮಧ್ಯೆ ಇರುವ ಜಾಗ ಆಗಿರುತ್ತದೆ. ನಿ ಡಿ 2 ರಲ್ಲಿರುವ ನೀಲಿ ಕಲರ್ ಶೀಟ್‌ನ ಮನೆ ನಿ ಪಿ 1 ರ ಚೆಕ್ಕುಬಂದಿಯ ಉತ್ತರಕ್ಕೆ ಇರುವ ಮನೆ ಎಂದರೆ ಸರಿ. ನಿ ಡಿ 2 ರಲ್ಲಿ ತೋರಿಸಿರುವ ವಾದಿಯರ ಮನೆ ಮತ್ತು ನೀಲಿ ಶೀಟ್‌ನ ಮನೆಯ ನಡುವೆ 6 ಅಡಿ ಜಾಗವಿದೆ ಎಂದರೆ ಸರಿ. ಸಾಕ್ಷಿ ಮತ್ತೆ ಮುಂದುವರೆದು 8 ಅಡಿ ಜಾಗವಿರುತ್ತದೆ ಎಂದು ನುಡಿಯುತ್ತಾರೆ.

ನಿ ಪಿ 1 ರಲ್ಲಿರುವ ಉತ್ತರ ದಕ್ಷಿಣ 36 ಅಡಿ ಜಾಗ, ನಿ ಡಿ 2 ರಲ್ಲಿ ತೋರಿಸಿರುವ ಮನೆ ಮತ್ತು ಉತ್ತರದ ಖಾಲಿ ಜಾಗ ಆಗಿರುತ್ತದೆ ಎಂದರೆ ಸರಿ. ಈ ದಾವೆ ಹೂಡುವ ಮೊದಲು ವಾದಿಯರ ಮನೆಯ ಉತ್ತರದ ಕಡೆಯಿರುವ ಖಾಲಿ ಜಾಗದಲ್ಲಿ ಓಡಾಡುವ ದಾರಿ ಇರುತ್ತದೆ ಎಂದು ವಾದಿಯರ ಜೊತೆ ಜಗಳ ಆಗಿರುತ್ತದೆ ಎಂದರೆ ಸರಿ. ವಾದಿಯರ ಮನೆಯ ಉತ್ತರ ದಿಕ್ಕಿಗೆ ಯಾವುದೇ ದಾರಿ

ಇಲ್ಲದಿದ್ದರೂ ದಾವಾ ಸ್ವತ್ತಿನಲ್ಲಿ ನಮಗೆ ದಾರಿ ಬೇಕು ಎಂದು ಗಲಾಟೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾರಾಯಣಪ್ಪರವರು ನಿ ಪಿ 1 ರಲ್ಲಿ ತಪ್ಪಾಗಿ ಚೆಕ್ಕುಬಂದಿ ನಮೂದಿಸಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯರಿಗೆ ತೊಂದರೆ ಕೊಡಲು ಸುಳ್ಳು ತಕರಾರು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಅಜಿತ್ ದೇವರಮನಿ)**
**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**
**ಬಂಗಾರಪೇಟೆ**